ಯಾರ್ಡ್ ಬಗ್ಗೆ ತಿದ್ದುಪಡಿ ತರಬೇಕೆಂದು ಹೇಳುತ್ತಿದ್ದಾರೆ. ಅದು ಸಹಕಾರ ಮಂತ್ರಿಗಳ ಅವಗಾಹನೆಯಲ್ಲಿದೆ. ಅದರ ಬಗ್ಗೆ ಅವರು ನಂತರ ಪ್ರಸ್ತಾಪ ಮಾಡುತ್ತಾರೆ. ಇನ್ನು ೬೦ ಲಕ್ಷ ರೂಪಾಯಿ ಗಳಿಸಿ ಕೊಡುವಲ್ಲಿ ಅದರ ವ್ಯಾಪ್ತಿಗೆ ಬರತಕ್ಕ ಜಿಲ್ಲೆಯ ಜನಗಳ ನೈತಿಕ ಜವಾಬ್ದಾರಿಯೂ ಇದೆ ಇದರ ಬಗ್ಗೆ ಮಸೂದೆ ಮಂಡನೆ ಆದ ಮೇಲೆ ಎಲ್ಲಾ ಶಾಸಕರ ಸಭೆ ಕರೆದು ಕ್ರಮ ತೆಗೆದುಕೊಳ್ಳುತ್ತೇನೆ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿಗೆ ಚುನಾವಣೆ

೩೩. ಶ್ರೀ ರಾಜೂಗೌಡ (ಹನೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಕೆಳಕಾಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ರಲ್ಲಿ ಜಿಲ್ಲಾ ಪರಿಷತ್ ಹಾಗು ಮಂಡಲ ಪಂಚಾಯಿತಿ ಮಸೂದೆಗೆ ರಾಷ್ಟ್ರಪತಿ ಒಪ್ಪಿಗೆ ದೊರೆತರೂ ಇದುವರೆವಿಗೂ ಚುನಾವಣೆಗಳು ನಡೆಯದಿರಲು ಕಾರಣವೇನು ?

ಆ) ಈವಾಗಲಾದರೂ ನಿರ್ದಿಷ್ಟ ದಿನವನ್ನು ಗೊತ್ತುಪಡಿಸಲು ಸರಕಾರದವರು ತೀರ್ಮಾನ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ನಜೀರ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು).—

ಅ) ಚುನಾವಣೆಗಾಗಿ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಾ ಇವೆ. ಕಾಯಿದೆಯಡಿಯಲ್ಲಿ ಅಡಕವಾಗಿರುವ ಕಲಮುಗಳ ರೀತ್ಯಾ ಚುನಾವಣೆಗಳ ಪೂರ್ವ ಭಾವಿಸಿದ್ಧತೆಗೆ ಸುಮಾರು ಆರು ತಿಂಗಳು ಗಳಿಗಿಂತ ಹೆಚ್ಚು ಕಾಲಬೇಕು ಆದರಂತೆ ಎಲ್ಲಾ ಸಿದ್ಧತೆಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ.

ಆ) ಸಧ್ಯದಲ್ಲಿಯೇ ನಿರ್ಧರಿಸಲಾಗುವುದು.

ಶ್ರೀ ವೇದಾಂತ ಹೆಮ್ಮಿಗೆ.— ಈ ಮಸೂದೆ ರಾಷ್ಟ್ರಪತಿ ಅಂಗೀಕಾರ ಆಗುವುದಕ್ಕೆ ತಡವಾಗಲು ಕಾರಣವೇನು ?

ಶ್ರೀ ಬಿ. ಆರ್. ಯಾವಗಲ್.— ರಾಷ್ಟ್ರಪತಿಯವರು ಆಗಸ್ಟ್ ತಿಂಗಳಿನಲ್ಲಿಯೇ ತಮ್ಮ ಅಂಗೀಕಾರವನ್ನು ನೀಡಿದ್ದಾರೆ. ಸುಮಾರು ೭-೮ ತಿಂಗಳ ಅವಧಿಯಲ್ಲಿ ಅನೇಕ ಕಾರಣಗಳಿಂದ ತಡವಾಗಿದೆ. ಕೆಲವು ಅಂಶಗಳನ್ನು ಒದಗಿಸಿಕೊಡಬೇಕಾದಂಥ ಸಂದರ್ಭದಲ್ಲಿ ತಡವಾಗಿದೆ. ಬೇರೆ ಯಾವುದೇ ಕಾರಣದಿಂದ ವಿಳಂಬವಾಗಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.— ಮಂಡಲ್ ಪಂಚಾಯತ್ ರಚನೆ ಮಾಡುವಾಗ ಪ್ರತಿಯೊಂದು ಊರು ಇಷ್ಟೇ ದೂರದಲ್ಲಿರಬೇಕೆಂದು ಕಾನೂನು ಇದೆ. ಆ ಕಾನೂನು ಮೀರಿ ದೂರದ ಅನೇಕ ಹಳ್ಳಿಗಳನ್ನು ಮಂಡಲ್ ಪಂಚಾಯಿತಿಗೆ ಸೇರಿಸಿದ್ದಾರೆ. ಇದನ್ನು ಸರಿಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಆರ್. ಯಾವ್‌ಗಲ್.— ಹತ್ತು ಕಿಲೋಮೀಟರ್‌ಗಳ ಪರಿಮಿತಿಯೊಳಗೆ ಬರತಕ್ಕ ಎಲ್ಲಾ ಹಳ್ಳಿಗಳನ್ನು ಮಂಡಲ್ ಪಂಚಾಯತ್‌ಗೆ ಸೇರಿಸಬೇಕೆಂದು ಇದೆ. ಮಾನ್ಯ ಸದಸ್ಯರು ಹೇಳಿದಂತೆ ಸಂದರ್ಭ ಏನಾದರೂ ಬಂದರೆ ಪರಿಶೀಲನೆ ಮಾಡಿ ಸರಿಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಬಂದು ಕಾಯಿದೆ ರೀತ್ಯಾ ವಿಭಾಗೀಯ ಅಧಿಕಾರಿಗಳ ಗಮನಕ್ಕೆ ತಂದು ಪರಿಶೀಲಿಸಿ ಸರಿಪಡಿಸುವಂತಾದ್ದು ಇದೆ.

ಶ್ರೀ ವೇದಾಂತ ಹೆಮ್ಮಿಗೆ.— ಮಂಡಲ್ ಪಂಚಾಯತ್, ಜಿಲ್ಲಾ ಪರಿಷತ್, ಕಾನೂನು ಪ್ರಕಾರ ಜನತೆಗೆ ಅಧಿಕಾರ ಹೋಗಬೇಕೆಂದು ಒಳ್ಳೆಯ ಉದ್ದೇಶದಿಂದ ಮಾಡಿದ್ದೀರಿ. ಇದು ಕೊಳೆತ ಮಂಡಲ್ ಆಗದ ರೀತಿ ಏನೇನು ವ್ಯವಸ್ಥೆ ಮಾಡಿದ್ದೀರಿ.

ಶ್ರೀ ಬಿ. ಆರ್. ಯಾವಗಲ್. — ಇದು ಒಂದು ವ್ಯವಸ್ಥಿತವಾದ ಘಟಕ ಆಗಬೇಕು. ಘಟಕ ಒಳ್ಳೆಯ ರೀತಿಯಲ್ಲಿ ಆಗುವುದಕ್ಕೆ ಯಾವ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಕಳೆದ ಅಧಿವೇಶನದ ಸಂದರ್ಭದಲ್ಲಿ ಮಂಡಲ್ ಪಂಚಾಯಿತಿಗಳ ಕ್ಷೇತ್ರ ವಿಂಗಡಣೆಯ ಬಗ್ಗೆ ಅನುಸರಿಸುವ ಕ್ರಮದ ಬಗ್ಗೆ ಶಾಸಕರನ್ನು ರಾಜಕೀಯ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆ ಭರವಸೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ. ಸರ್ಕಾರಿ ಅಧಿಕಾರಿಗಳು ಕೂಡ ಒಂದು ಗೊಂದಲಕ್ಕೊಳಗಾಗಿ ಏನೋ ಒಂದು ರೀತಿಯಲ್ಲಿ ಕ್ಷೇತ್ರ ವಿಂಗಡಣೆ ಮಾಡಿದ್ದಾರೆ. ನಾವು ಕೊಟ್ಟ ಸಲಹೆಗಳಿಗೂ, ಅವರು ಮಾಡಿದ್ದಕ್ಕೂ ಅರ್ಥಾತ್ ಸಂಬಂಧವಿಲ್ಲ.

ಅಧ್ಯಕ್ಷರು.— ಆ ರೀತಿ ಏನಾದರೂ ಆಗಿದ್ದರೆ ನೀವು ಬರೆದು ಕಳುಹಿಸಿಕೊಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಸ್ವಲ್ಪ ವ್ಯತ್ಯಾಸ ಆಗಿದ್ದರೆ ಬರೆದು ಕಳುಹಿಸಬಹುದಾಗಿತ್ತು. ನಾವು ಹೇಳಿದ್ದಕ್ಕೂ ಅವರು ಮಾಡಿದ್ದಕ್ಕೂ ಒಂದಕ್ಕೊಂದು ಸಂಬಂಧವಿಲ್ಲ. ಪೂರ್ವ ನಿಯೋಜಿತವಾಗಿ ಹೇಗೆ ಬೇಕೋ ಹಾಗೆ ಮಾಡಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ, ಇದರ ಬಗ್ಗೆ ಸಮರ್ಪಕವಾದ ಚರ್ಚೆ ಇಲ್ಲಿ ಆಗಬೇಕಾದ್ದು ಅಗತ್ಯ ಇದೆ, ಅದಕ್ಕೆ ಒಪ್ಪಿಗೆ ಕೊಡಬೇಕು.

ಶ್ರೀ ಬಿ ಆರ್. ಯಾವಗಲ್.— ಮಾನ್ಯ ಸದಸ್ಯರು ಯಾವುದೇ ರೀತಿಯಿಂದ ರಾಜಕೀಯ ಪಕ್ಷಗಳನ್ನು ಮತ್ತು ಶಾಸಕರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಮಾಡಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದುದು. ಇದನ್ನು ಜಾರಿ ಮಾಡುವ ಹಂತದಲ್ಲಿ ಕೆಲವು ರೀತಿಯ ಸಮಸ್ಯೆಗಳಿಂದ ಅಡಚಣೆ ಯಾದದ್ದು ನಿಜ. ೧೯೭೧–೮೧ರ ಸೆನ್‌ಸಸ್ ವಿಚಾರದ ಬಗ್ಗೆ ಬಿಟ್ಟರೆ ಬೇರೆ ಯಾವುದೇ ರೀತಿಯ ಅಸ್ಪಷ್ಟ ನಿಲುವು ಇರಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅಧ್ಯಕ್ಷರೆ, ...

ಅಧ್ಯಕ್ಷರು.— ಇದು ಚರ್ಚೆ ಅಲ್ಲ, ತಾವು ಸಜಾವೆ ಸಪ್ಲಿಮೆಂಟರಿ ಕೇಳಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದೆ, ಈಗ ಸಮಯ ಆಗುತ್ತಿದೆ, ದಯಮಾಡಿ ಕುಳಿತುಕೊಳ್ಳಿ. ಈಗ ಅರ್ಧ ಗಂಟೆಯಲ್ಲಿ ೧೦ ಪ್ರಶ್ನೆಗಳು ಮುಗಿಯಲೇ ಬೇಕು, ನನಗೆ ಜವಾಬ್ದಾರಿ ಇದೆ, ನನಗೆ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡ ಬೇಕೆಂಬ ಉದ್ದೇಶ ಇಲ್ಲ ತಾವು ಒಳ್ಳೆಯ ಪ್ರಶ್ನೆಗಳನ್ನು ಕೇಳುತ್ತೀರಿ ಎಂದು ಅವಕಾಶ ಮಾಡಿಕೊಟ್ಟರೆ ಕಾಂಪ್ಲಿಕೇಟ್ ಮಾಡಲಿಕ್ಕೆ ಹೊರಟಿದ್ದೀರಿ. ದಯಮಾಡಿ ಕುಳಿತುಕೊಳ್ಳಬೇಕು. ಈ ಪ್ರಶ್ನೆಯನ್ನೆ ಅರ್ಧ ಗಂಟೆ ಕಾಲದ ಚರ್ಚೆಗೆ ಬೇಕಾದರೆ ಹಾಕಿ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಬೇಕು.

ಗೆಜೆಟೆಡ್ ಮುಖ್ಯೋಪಾಧ್ಯಾಯರುಗಳಿಗೆ ವಿದ್ಯಾಧಿಕಾರಿಗಳಾಗಿ ಬಡ್ತಿ.

೨೯. ಶ್ರೀ ಬಿ, ಎಸ್. ಯಡಿಯೂರಪ್ಪ.— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ವಿಜ್ಞಾನಗಾರಿಕಾ ಪ್ರೌಢಶಾಲೆಗಳನ್ನು ಸರ್ಕಾರಿ ಆಜ್ಞೆಯಂತೆ ದಿನಾಂಕ, ೧–೪–೭೫ ರಿಂದ ವಿದ್ಯಾ ಇಲಾಖೆಗೆ ವರ್ಗಾಯಿಸಿರುವುದು ನಿಜವೆ ?

ಆ) ದಿನಾಂಕ, ೨೧–೧–೧೯೭೧ರವರೆಗೆ ರಾಜ್ಯ ಪತ್ರಾಂಕಿತ ದರ್ಜೆಯ ಮುಖ್ಯೋಪಾಧ್ಯಾಯರು ಗಳಿಗೆ ವಿದ್ಯಾಧಿಕಾರಿಗಳಾಗಿ ಬಡ್ತಿ ನೀಡಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರವರು ಶಿಕ್ಷಣ ಇಲಾಖೆ ಕಾರ್ಯದರ್ಶಿಗಳಿಗೆ ಇತ್ತೀಚೆಗೆ ಪಟ್ಟಿ ಕಳುಹಿಸಿರುವುದು ನಿಜವೆ.

ಇ) ಹಾಗಿದ್ದಲ್ಲಿ ದಿನಾಂಕ, ೨೧–೧–೧೯೭೧ರ ಮೊದಲೆ ರಾಜ್ಯ ಪತ್ರಾಂಕಿತ ಮುಖ್ಯೋಪಾಧ್ಯಾಯ ರಾಗಿ ಸೇವೆ ಸಲ್ಲಿಸುತ್ತಿದ್ದ, ಶ್ರೀ ಐ. ಎಲ್. ಮಿತ್ತಂತ್ತಾಯ, ಮುಖ್ಯೋಪಾಧ್ಯಾಯ, ಮಂಜೇಶ್ವರ, ದಕ್ಷಿಣ ಕನ್ನಡ ಹಾಗೂ ಶ್ರೀ ಯು. ರಾಘವೇಂದ್ರ ಐತಾಳ್, ಉಪನ್ಯಾಸಕರು, ಸರಕಾರಿ ಶಿಕ್ಷಣ ಮಹಾ ವಿದ್ಯಾಲಯ, ಮಂಗಳೂರು, ಇವರ ಹೆಸರನ್ನು ಈ ಪಟ್ಟಿಯಲ್ಲಿ ಕೈಬಿಟ್ಟಿರುವುದು ನಿಜವೆ, ಹಾಗಿದ್ದಲ್ಲಿ ಆದಕ್ಕೆ ಕಾರಣವೇನು ಹಾಗೂ ಉದ್ದೇಶಪೂರ್ವಕವಾಗಿ ಕೈ ಬಿಟ್ಟಿದ್ದರೆ ಅಂತಹ ಅಧಿಕಾರಿಗಳ ಮೇಲೆ ಸರಕಾರದವರು ಕ್ರಮ ಕೈಕೊಳ್ಳುವರೆ ?